ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 2-11-2016

## ಪತ್ರಿಕಾ ಆಮಂತ್ರಣ

1. ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಕೆರೆಗಳ ಒತ್ತುವರಿ ಕುರಿತು ಸಮಗ್ರ ತನಿಖೆ ನಡೆಸಿ ಸಂರಕ್ಷಣೆಗೆ ಸೂಕ್ತ ಶಿಫಾರಸ್ಸಿನೊಂದಿಗೆ ವರದಿ ಸಲ್ಲಿಸಲು ರಚಿಸಲಾಗಿರುವ ಸದನ ಸಮಿತಿಯಿಂದ ಸ್ಥಳ ಪರಿಶೀಲನೆ:

   ಪರಿವೀಕ್ಷಿಸಲಿರುವ ಸ್ಥಳಗಳು:

   ನವೆಂಬರ್ 3 ರ ಗುರುವಾರದಂದು:

   1. ಕಾರ್ಲೆ ಕಂಪನಿ, ಮಾನ್ಯತಾ ಟೆಕ್‌ಪಾರ್ಕ್ ಹತ್ತಿರ.
   2. ಬಾಗ್‌ಮನೆ ಟೆಕ್‌ಪಾರ್ಕ್, ಭೈರಸಂದ್ರ ಕೆರೆ:
   3. ವಿ.ಆರ್.ಬೆಂಗಳೂರು ಮಾಲ್ ಕುಂಟೆ, ಕೆ.ಆರ್. ಪುರ ಹೋಬಳಿ.
   4. ದಾಸರಹಳ್ಳಿ ಸರ್ವೆ ನಂ 61, ರಾಚೇನ ಗ್ರಾಮ, ಕೆ.ಆರ್. ಪುರ ಹೋಬಳಿ.

   ನವೆಂಬರ್ 4 ರ ಶುಕ್ರವಾರದಂದು:

   1. ಸಿಂಬೈಯಾಸಿಸ್, ವೀರಸಂದ್ರ ಗ್ರಾಮ, ಆನೇಕಲ್ ತಾಲ್ಲೂಕು
   2. ಆಸ್ತ ವಾಲ್‌ಮಾರ್ಕ್ ಅಪಾರ್ಟ್‌ಮೆಂಟ್, ಮೀನಾಕ್ಷಿ ದೇವಸ್ಥಾನ ಹಿಂಭಾಗ, ಬನ್ನೇರುಘಟ್ಟ ರಸ್ತೆ, ಹುಳಿಮಾವು ಮತ್ತು ಕಾಳೇನ ಅಗ್ರಹಾರ ಗ್ರಾಮ, ಉತ್ತರಹಳ್ಳಿ ಹೋಬಳಿ.
   3. ಪೂರ್ವಂಕರ ಅಪಾರ್ಟ್‌ಮೆಂಟ್ಸ್, ಪುಟ್ಟೇನಹಳ್ಳಿ, ಜೆ.ಪಿ. ನಗರ.

   ಪರಿವೀಕ್ಷಣೆ ತೆರಳುವ ಮುನ್ನ ಸಭೆ:

   ಶಾಸಕರ ಭವನ ಕಟ್ಟಡ – 2 ರ ಸಮ್ಮೇಳನ ಸಭಾಂಗಣ, ಸಮಯ 8-30 ಗಂಟೆಗೆ ನಂತರ 9-00 ಗಂಟೆಗೆ ಸ್ಥಳ ಪರಿಶೀಲನೆಗಾಗಿ. (ಎರಡು ದಿನಗಳು)

2. ರಾಜ್ಯ ಮಟ್ಟದ ಒಂದು ದಿನದ ವಿಚಾರ ಸಂಕಿರಣ:

   ಕೈಗಾರಿಕಾ ಉತ್ಪಾದಕರ, ಖರೀದಿದಾರರ ಮತ್ತು ಮಾರಾಟಗಾರರ ನಿರಂತರ ಅಭಿವೃದ್ಧಿ.

   ದಿನಾಂಕ: 03-11-2016 ಸಮಯ: ಬೆಳಿಗ್ಗೆ 10.00 ಗಂಟೆಗೆ

**ಸ್ಥಳ: ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (KASSIA) ಉದ್ಯೋಗ ಭವನ, ನಂ 2/106, 17ನೇ ಕ್ರಾಸ್, ಮಾಗಡಿ ಕಾರ್ಡ್‌ರಸ್ತೆ, ವಿಜಯನಗರ, ಬೆಂಗಳೂರ, ಬೆಂಗಳೂರು – 560 040**

3. **"ಜಾಗೃತಿ ಅರಿವಿನ ಸಪ್ತಾಹ – 2016"**
   **ಸಪ್ತಾಹಕ್ಕೆ ಚಾಲನೆ ಹಾಗೂ ಪ್ರತಿಜ್ಞಾ ವಿಧಿ ಬೋಧನೆ:**
   **ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ,**
   **ದಿನಾಂಕ: 03-11-2016 ಗುರುವಾರ, ಸಮಯ: ಬೆಳಿಗ್ಗೆ 11-00 ಗಂಟೆಗೆ.**
   **ಸ್ಥಳ : ವಿಧಾನಸೌಧದ ಸಮ್ಮೇಳನ ಸಭಾಂಗಣ (ಕೊಠಡಿ ಸಂಖ್ಯೆ 334. ಮೂರನೇ ಮಹಡಿ).**

4. **ಐರಿಲೀಫ್ ಮೊಬೈಲ್ ಅಪ್ಲಿಕೇಷನ್ ಬಿಡುಗಡೆ ಸಮಾರಂಭ.**
   **ಮುಖ್ಯ ಅತಿಥಿ: ಕೆ. ಆರ್. ರಮೇಶ್ ಕುಮಾರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು,**
   **ಅಧ್ಯಕ್ಷತೆ: ಆರ್. ರೋಷನ್ ಬೇಗ್, ನಗರಾಭಿವೃದ್ಧಿ ಸಚಿವರು**
   **ದಿನಾಂಕ: 03-11-2016 ಗುರುವಾರ, ಸಮಯ: ಬೆಳಿಗ್ಗೆ 11-00 ಗಂಟೆಗೆ.**
   **ಸ್ಥಳ: ತಾಜ್ ವೆಸ್ಟೆಂಡ್, ಬೆಂಗಳೂರು.**

### ಪತ್ರಿಕಾ ಪ್ರಕಟಣೆ

## ನವೆಂಬರ್ 21 ರಿಂದ ಬೆಳಗಾವಿಯಲ್ಲಿ ವಿಧಾನಸಭೆ ಅಧಿವೇಶನ

ಬೆಂಗಳೂರು, ನವೆಂಬರ್ 2 (ಕರ್ನಾಟಕ ವಾರ್ತೆ)

ಬೆಳಗಾವಿಯ ಸುವರ್ಣ ವಿಧಾನಸೌಧದ ವಿಧಾನಸಭೆಯ ಸಭಾಂಗಣದಲ್ಲಿ 14 ನೇ ವಿಧಾನಸಭೆಯ 12 ನೇ ಅಧಿವೇಶನವು 21 ನವೆಂಬರ್ 2016 ರಿಂದ 02 ಡಿಸೆಂಬರ್ 2016ರ ವರೆಗೆ ನಡೆಯಲಿದೆ ಎಂದು ವಿಧಾನಸಭೆಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಜೆಡಿ:ಜಿಪಿಆರ್.

# ಕಾನೂನು ಪದವೀಧರರಿಗೆ ಉದ್ಯೋಗ ಅವಕಾಶ

ಬೆಂಗಳೂರು, ನವೆಂಬರ್ 2 (ಕರ್ನಾಟಕ ವಾರ್ತೆ)

ಪ್ರತಿಭಾವಂತ ಕಾನೂನು ಪದವೀಧರರಿಗೆ, ಕಾನೂನು ವೃತ್ತಿಗೆ ಸೇರ್ಪಡೆ, ಕಾನೂನು ತಕರಾರು ಅರ್ಜಿಗಳ ವಿವಿಧ ರೂಪಗಳು, ಕಾನೂನಿನ ವಿವಿಧ ಶಾಖೆಗಳು ಮತ್ತು ನ್ಯಾಯಾಲಯದ ಕಾರ್ಯವಿಧಾನಗಳ ಪರಿಚಯ ಮಾಡಿಕೊಡುವ ಸಲುವಾಗಿ ಹಾಗೂ ನವ ಕಾನೂನು ಪದವೀಧರರಿಗೆ ಉತ್ತೇಜನ ನೀಡುವ ಸಲುವಾಗಿ, ಕಾನೂನು ಪದವಿ (ಕನಿಷ್ಠ ಶೇ 50 ಅಂಕಗಳು) ಹೊಂದಿರುವಂತಹ ಆಸಕ್ತ ಅಭ್ಯರ್ಥಿಗಳಿಂದ 26 ಲಾ ಕ್ಲರ್ಕ್ ಮತ್ತು ರೀಸರ್ಚ್ ಅಸಿಸ್ಟೆಂಟ್ಸ್ ಹುದ್ದೆಗಳಿಗೆ ಕರ್ನಾಟಕ ಉಚ್ಚ ನ್ಯಾಯಾಲಯ ಅರ್ಜಿ ಆಹ್ವಾನಿಸಿದೆ.

ಆಸಕ್ತ ಅಭ್ಯರ್ಥಿಗಳು ದಿನಾಂಕ: 01–01–2014 ರಂದು ಅಥವಾ ನಂತರ ಕರ್ನಾಟಕ ಸ್ಟೇಟ್ ಬಾರ್ ಕೌನ್ಸಿಲ್‌ನಲ್ಲಿ ನೊಂದಾಯಿಸಿರಬೇಕು ಮತ್ತು ಅರ್ಜಿದಾರರ ವಯಸ್ಸು ಅರ್ಜಿ ಸಲ್ಲಿಸುವ ಕೊನೆಯ ದಿನದಂದು 30 ವರ್ಷಗಳನ್ನು ಮೀರಿರಬಾರದು.

ಭರ್ತಿಮಾಡಿರುವ ಅರ್ಜಿಗಳನ್ನು ಸ್ವೀಕರಿಸಲು ನವೆಂಬರ್ 30, 2016 ಕೊನೆಯ ದಿನವಾಗಿರುತ್ತದೆ. ಸವಿಸ್ತಾರವಾದ ಅಧಿಸೂಚನೆಗೆ www.karnatakajudiciary.kar.nic.in ಗೆ ಭೇಟಿ ನೀಡಬಹುದಾಗಿದೆ.

ಜೆಡಿ:ಜಿಪಿಆರ್.

# ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ರಾಷ್ಟ್ರಪ್ರಶಸ್ತಿ

ಬೆಂಗಳೂರು, ನವೆಂಬರ್ 2 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಕಳೆದ ಎರಡು ವರ್ಷಗಳಲ್ಲಿ ಅನುಷ್ಠಾನಗೊಳಿಸಿದ ವಿವಿಧ ಕಾರ್ಯಕ್ರಮಗಳ ಯಶಸ್ಸನ್ನು ಪರಿಗಣಿಸಿ ಭಾರತ ಸರ್ಕಾರದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಮಂತ್ರಾಲಯ ರಾಷ್ಟ್ರಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಇತ್ತೀಚೆಗೆ ಪಂಜಾಬ್ ರಾಜ್ಯದ ಲೂಧಿಯಾನದ ಪಂಜಾಬ್ ಅಗ್ರಿಕಲ್ಚರ್ ಯೂನಿವರ್ಸಿಟಿ ಸಭಾಂಗಣದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಭಾರಂಭದಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎಸ್. ನವೀನ್‌ಕುಮಾರ್ ರಾಜು ಅವರು ಮಂಡಳಿಯ ಪರವಾಗಿ ರಾಷ್ಟ್ರ ಪ್ರಶಸ್ತಿಯನ್ನು ಸ್ವೀಕರಿಸಿದರು.

ಜೆಡಿ:ಬಿಜಿಪಿ:ಜಿಪಿಆರ್.

# ಬಿ.ಇಡಿ ಕೋರ್ಸ್‌ಗೆ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 2 (ಕರ್ನಾಟಕ ವಾರ್ತೆ)

ಸಾರ್ವಜನಿಕ ಶಿಕ್ಷಣ ಇಲಾಖೆ 2016–17 ನೇ ಸಾಲಿನ ಎರಡು ವರ್ಷದ ಬಿ.ಇಡಿ ಕೋರ್ಸ್‌ನ ವ್ಯಾಸಂಗಕ್ಕಾಗಿ ರಾಜ್ಯದ ಸರ್ಕಾರಿ, ಮಾನ್ಯತೆ ಪಡೆದಿ ಅನುದಾನಿತ ಹಾಗೂ ಅನುದಾನ ರಹಿತ ಬಿ.ಇಡಿ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಜಿ ನಮೂನೆ ಮತ್ತು ಮಾರ್ಗಸೂಚಿಗಾಗಿ ಇಲಾಖಾ ವೆಬ್‌ಸೈಟ್ www.schooleducation.kar.nic.in ಅನ್ನು ವೀಕ್ಷಿಸಬಹುದಾಗಿದೆ. ವೆಬ್‌ಸೈಟ್‌ನಲ್ಲಿ ಜಿಲ್ಲಾವಾರು ಬಿ.ಇಡಿ ಶಿಕ್ಷಣ ಸಂಸ್ಥೆಗಳ ಪಟ್ಟಿ, ಅರ್ಹತೆ, ಮೀಸಲಾತಿ ವಿವರ ಹಾಗೂ ಇತರೆ ಸೂಚನೆಗಳನ್ನು ನೀಡಲಾಗಿದೆ.

ಅಭ್ಯರ್ಥಿಗಳು ಕಡ್ಡಾಯವಾಗಿ ಅವುಗಳನ್ನು ಓದಿಕೊಂಡು ಆನ್‌ಲೈನ್ ಅರ್ಜಿಯನ್ನು ಕ್ರಮಬದ್ಧವಾಗಿ ಭರ್ತಿಮಾಡುವುದು. ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಗಳ ಸಿ.ಟಿ.ಇ./ಡಯಟ್ ಪ್ರಾಂಶುಪಾಲರುಗಳನ್ನು ಸಂಪರ್ಕಿಸಬಹುದು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ.

ಜೆಡಿ:ಜಿಪಿಆರ್.